**Code No. 08 X(B)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ, 2018

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಸಂಶಯ ಎನ್ನುವುದು ಮಾನವರಲ್ಲಿ ಕಂಡುಬರುವ ಒಂದು ವಿಚಿತ್ರವಾದ ಮನಃಸ್ಥಿತಿ. ಸಂಶಯ ಅತಿಯಾದಾಗ ಅದು ಒಂದು ಬಗೆಯ ಮನೋವಿಕಲ್ಪ ಅಥವಾ ಮಾನಸಿಕ ರೋಗವಾಗಿ ಮನುಷ್ಯನನ್ನು ಕಾಡುತ್ತದೆ. ಸಂಶಯ ಪ್ರವೃತ್ತಿ ವಿಪರೀತಕ್ಕೆ ಹೋದ ಸಂದರ್ಭದಲ್ಲಿ ಮನುಷ್ಯ ತನ್ನ ಆಲೋಚನೆ ಮತ್ತು ನಿರ್ಧಾರಗಳ ಬಗ್ಗೆ ಸಮತೋಲನವನ್ನು ಕಳೆದುಕೊಂಡು ತನ್ನನ್ನು ತಾನೇ ನಂಬದಸ್ಥಿತಿಗೆ ತಲುಪಿ ಮಾನಸಿಕ ಜಿಗುಪ್ಸೆಗೆ ಒಳಗಾಗುತ್ತಾನೆ. ಈ ಮನಃಸ್ಥಿತಿಯಲ್ಲಿ ತನ್ನ ಹೆಂಡತಿ, ಮಕ್ಕಳು, ಬಂಧುಬಾಂಧವರು, ಗೆಳೆಯ ಹಿತೈಷಿಗಳನ್ನು ಅನುಮಾನದಿಂದ ನೋಡುವ ಪ್ರವೃತ್ತಿ ಬೆಳೆದು ಸುತ್ತಣ ಸಮಾಜದಲ್ಲಿ ಅಲಕ್ಷ್ಯಕ್ಕೆ ಒಳಗಾಗಲೂಬಹುದು. ಈ ಅನುಮಾನ ಪ್ರವೃತ್ತಿಯನ್ನು ತೆಲುಗಿನ ರೂಢಿಯ ನುಡಿಯಂತೆ ಅನುಮಾನಂ ಪೆದ್ದ ರೋಗಂ, ಎಂದರೆ ಅನುಮಾನ ಎನ್ನುವುದು ಒಂದು ದೊಡ್ಡ ರೋಗ ಎಂದಿದೆ. ಅನುಮಾನ ಎನ್ನುವುದಕ್ಕೆ ಸಂಶಯ ಎನ್ನುವುದು ಪರ್ಯಾಯ ಪದ. ಇದಕ್ಕೆ ಪಿಶಾಚಿ ಎಂಬ ಪದವು ಸೇರಿ ಸಂಶಯಪಿಶಾಚಿ ಎಂದು ಹೇಳುತ್ತಾರೆ. ಈ ಸಂಶಯ ಅಥವಾ ಅನುಮಾನ ಎನ್ನುವುದು ಒಂದು ಪ್ರಕೃತಿಕವಾದ ಸಹಜ ಮನೋಭಾವವಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸಂಶಯಪಿಶಾಚಿ ಮನಸ್ಸನ್ನು ಹೊಕ್ಕಂತೆ ಮಾಡುವ ಅನಾಹುತಗಳಿಗೆ ಲೆಕ್ಕವಿಲ್ಲ. ಸಂಶಯವೆಂಬ ವಿಷವರ್ತುಲದಲ್ಲಿ ಸಿಕ್ಕಿದ ಮನಸ್ಸು ವಿವೇಚನೆಯನ್ನು ಕಳೆದುಕೊಳ್ಳುತ್ತದೆ. ಅದರಲ್ಲೂ ಗಂಡಹೆಂಡತಿಯರ ನಡುವೆ ಸಂಶಯ ಕಾಲಿಟ್ಟರೆ ಅನೇಕ ವೇಳೆ ದೊಡ್ಡ ಅನಾಹುತವೇ ಆಗಿ ಸಂಬಂಧವೇ ಕಡಿದು ಹೋಗುವಂತಹ ಪರಿಸ್ಥಿತಿ ಉಂಟಾದ ಅನೇಕ ನಿದರ್ಶನಗಳನ್ನು ನಾವು ನೋಡಿದ್ದೇವೆ. ಈ ಮಾತು ಸ್ನೇಹ

[ Turn over

ಸಂಬಂಧಗಳಿಗೂ ಅನ್ವಯಿಸುತ್ತದೆ. ಮನುಷ್ಯ ಸ್ವಭಾವತಃ ಒಳ್ಳೆಯವನಾಗಿ ನಿರ್ಮಲ ಮನಸ್ಸಿನವನೇ ಆಗಿರಬಹುದು. ಆದರೆ ಕೆಲವು ಸಂದರ್ಭಗಳಲ್ಲಿ ದುಷ್ಟ ವ್ಯಕ್ತಿಗಳು ನಿರ್ಮಲ ಮನಸ್ಸಿನಲ್ಲಿ ಸಂಶಯದ ವಿಷಬೀಜವನ್ನು ಬಿತ್ತಿ ಅನಾಹುತಗಳಿಗೆ ಕಾರಣವಾಗುತ್ತಾರೆ. ತಿಳಿಯಾದ ಮನಸ್ಸನ್ನು ಕದಡಿ ರಾಡಿ ಮಾಡುವುದರಲ್ಲಿ ಅವರಿಗೆ ಒಂದು ಬಗೆಯ ವಿಚಿತ್ರವಾದ ಸಂತೋಷ. ಇನ್ನೊಬ್ಬರು ನೆಮ್ಮದಿಯಿಂದ ಬಾಳುವುದನ್ನು ಕಂಡು ಸಹಿಸದ ಈ ವರ್ಗದ ಜನರನ್ನು ಮನೋವಿಕಾರ ಪೀಡಿತರೆನ್ನಬಹುದು. ಅಂದರೆ ಸಂಶಯ ಪ್ರವೃತ್ತಿಯು ಮನುಷ್ಯನ ಸಹಜ ಆಲೋಚನೆ ಮತ್ತು ನಿರ್ಧಾರಗಳಿಗೆ ಪೂರಕವೆನಿಸುವ ಮನಃಸ್ಥಿತಿ.

ಈ ಮನಃಸ್ಥಿತಿಯ ಜನ ಹೆಜ್ಜೆಹೆಜ್ಜೆಗೂ ಎಲ್ಲರನ್ನೂ ಅನುಮಾನದಿಂದಲೇ ನೋಡುತ್ತಾರೆ. ಸಹಜವಾದ ಮನುಷ್ಯರಿಗೆ ಮುಖದ ಮೇಲೆ ಎರಡು ಕಣ್ಣುಗಳಿದ್ದರೆ, ಸಂಶಯ ಪೀಡಿತ ಮನುಷ್ಯರಿಗೆ ನೂರಾರು ಬಗೆಯ ಕಣ್ಣುಗಳಿರುತ್ತವೆ. ಅವು ವಾಸ್ತವ ದೃಷ್ಟಿಯಿಂದ ಕೂಡಿರದೆ ವಕ್ರ ಪೀಡಿತ ಅಕ್ಷಿಗಳು. ಇವುಗಳ ದೃಷ್ಟಿ ತುಂಬಾ ಅಪಾಯಕಾರಿ. ಆದ್ದರಿಂದ ಯಾರೇ ಆಗಲಿ ಸಮಾಜದಲ್ಲಿ ಸಂಶಯದ ಕಣ್ಣಿನಿಂದ ನೋಡುವುದು ತುಂಬಾ ಅಪಾಯಕಾರಿ ಮತ್ತು ಅನರ್ಥಕಾರಿ. ಅಸಹನೆಗಳಿಗೆ ಕಾರಣವಾಗಿ ಮನಸ್ಸು ಅವುಗಳನ್ನು ಪೋಷಿಸುವ ಫಲವತ್ತಾದ ಆಗರವಾಗುತ್ತದೆ. ಇದರಿಂದ ಸುತ್ತಣ ಸಮಾಜಕ್ಕೂ ಕೇಡು, ತನಗೂ ಮಾನಸಿಕ ಕ್ಲೇಶ ಈ ವಿಷಯಕ್ಕೆ ಉದಾಹರಿಸಬಹುದು.

ಈ ವಚನ ಹೀಗಿದೆ ಕಟ್ಟದಿರು ಮನದೊಳಗೆ ಅನುಮಾನದ ಹುತ್ತವನು ಹೊಂಚು ಹಾಕುತ ಇರುವುದು ಕ್ರೋಧ ಮತ್ಸರವೆಂಬ ಘಟಸರ್ಪ ಒಳಹೊಕ್ಕು ಮಂಡಲ ಹೋಯ್ದು ಹೆಡೆಬಿಚ್ಚಿ ವಿಷಕಾರಿ ಕಡೆಗೆ ನಿನ್ನನ್ನೇ ಅಪ್ಪಳಿಸಲೆಂದು ಜೋಗಿ. ಆದ್ದರಿಂದ ಅನುಮಾನವೆಂಬ ವಿಷಸರ್ಪವು ನಮ್ಮ ಮನಸ್ಸನ್ನು ಹೊಕ್ಕು ಅನರ್ಥಗಳನ್ನುಂಟು ಮಾಡದಂತೆ ಎಚ್ಚರದಿಂದ ಇರುವುದು ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳುವುದು ವಿವೇಕಿಗಳ ಲಕ್ಷಣ. ಆದ್ದರಿಂದಲೇ ಕನ್ನಡದ ಮಹಾನ್ ಲೇಖಕ ಚಿಂತಕ ಡಿ.ವಿ. ಗುಂಡಪ್ಪನವರು ಬಾಳಿಗೊಂದು ನಂಬಿಕೆ ಇರಬೇಕು ಎಂದಿದ್ದಾರೆ. ಹರಿದಾಸರು ಸಹ ನಂಬಿಕೆಟ್ಟವರಿಲ್ಲ ಹರಿ ನಿನ್ನ ನಂಬದೆ ಕೆಟ್ಟರೆ ಕೆಡಲಿ ಎಂದಿದ್ದಾರೆ. ಈ ಮಾತು ಸಹ ಬದುಕಿನಲ್ಲಿ ಸಂಶಯಕ್ಕಿಂತ ನಂಬಿಕೆ ಅನರ್ಥವನ್ನು ದೂರ ಮಾಡುತ್ತದೆ ಎಂಬ ಸಂದೇಶವನ್ನು ಸಾರಿದೆ, ಸಂಶಯದಿಂದ ಯಾರಿಗೂ ಸುಖವಿಲ್ಲ.